ಮಣಿಸಿ ಬಂದರು.

ಸೆಪ್ಟೆಂಬರ್‌ನಲ್ಲಿ ತವರಿನ ಋತುವಿಗೆ ಆರಂಭ ದೊರೆಯಿತು. ಕಾನ್ಪುರದ ಗ್ರೀನ್ ಪಾರ್ಕ್ ಅಂಗಳದಲ್ಲಿ ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್ ನಡೆಯಿತು. ಅದು ಭಾರತಕ್ಕೆ 500ನೇ ಟೆಸ್ಟ್ ಕೂಡ ಆಗಿತ್ತು. ರವಿಚಂದ್ರನ್ ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರ ಕೈಚಳಕದ ಎದುರು ಕಿವೀಸ್ ತಂಡ ಸೋತಿತು. ಕೋಲ್ಕತ್ತದಲ್ಲಿ ತಿರುಗೇಟು ನೀಡುವ ಸರ್ವಪ್ರಯತ್ನದ ಹೊರತಾಗಿಯೂ ನ್ಯೂಜಿಲೆಂಡ್ ಸೋತಿತು. ಇಂದೋರ್‌ನಲ್ಲಿ ವಿರಾಟ್ ಕೊಹ್ಲಿಯ ಅಮೋಘ ದ್ವಿಶತಕದ ರಭಸದಲ್ಲಿ ಕಿವೀಸ್ ಕೊಚ್ಚಿಹೋಯಿತು. ಭಾರತ ತಂಡವು ಐಸಿಸಿ ಶ್ರೇಷ್ಠಾಂಕ ಪಟ್ಟಿಯಲ್ಲಿ ಪಾಕಿಸ್ತಾನವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿತು.

ನಂತರ ನವೆಂಬರ್‌ನಲ್ಲಿ ಬಂದ ಅಲಸ್ಟೇರ್ ಕುಕ್ ಬಳಗವು ರಾಜ್‌ಕೋಟ್‌ನಲ್ಲಿ ಅಮೋಘ ಆಟವಾಡಿತ್ತು. ಬಹುತೇಕ ಜಯದ ಹೊಸ್ತಿಲಿಗೆ ಬಂದು ನಿಂತಿತ್ತು. ಆದರೆ, ಎರಡನೇ ಇನಿಂಗ್ಸ್‌ನಲ್ಲಿ ವಿರಾಟ್ ಆಟದ ಫಲವಾಗಿ ಪಂದ್ಯ ಡ್ರಾ ಕಂಡಿತು. ನಂತರದ ಮೂರು ಪಂದ್ಯಗಳಲ್ಲಿ ಇಂಗ್ಲೆಂಡ್‌ನ ಕುಕ್, ಜೋ ರೂಟ್, ಮೋಯಿನ್ ಅಲಿ, ಜಾಸ್ ಬಟ್ಲರ್ ಅವರ ಉತ್ತಮ ಬ್ಯಾಟಿಂಗ್ ಮತ್ತು ಜೇಮ್ಸ್ ಆ್ಯಂಡರ್ಸನ್, ರಶೀದ್ ಮತ್ತು ಮೊಹಿನ್ ಅಲಿ ಅವರ ಬೌಲಿಂಗ್ ಕಳೆಗಟ್ಟಿತ್ತು. ಆದರೆ, ಅದಕ್ಕೆ ತಕ್ಕ ಉತ್ತರ ನೀಡಿದ ಮುರಳಿ ವಿಜಯ್, ವಿರಾಟ್, ಪೂಜಾರ, ಜಯಂತ್ ಯಾದವ್, ರವೀಂದ್ರ ಜಡೇಜ ಅವರ ಆಟವೇ ಮೇಲುಗೈ ಪಡೆಯಿತು. ಸತತ ಮೂರು ಪಂದ್ಯಗಳಲ್ಲಿಯೂ ಗೆದ್ದು ಸರಣಿಯನ್ನು ತನ್ನದಾಗಿಸಿಕೊಂಡಿತು. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ದ್ವಿಶತಕ ಹೊಡೆದ ವಿರಾಟ್ ನಂತರ ಹೈದರಾಬಾದ್‌ನಲ್ಲಿ ಬಾಂಗ್ಲಾ ಎದುರು ಮತ್ತೊಂದು ಡಬಲ್ ಸಾಧನೆ ಮಾಡಿದರು. ಅದರೊಂದಿಗೆ ಸತತ ನಾಲ್ಕು ಸರಣಿಗಳಲ್ಲಿ ದ್ವಿಶತಕ ಹೊಡೆದ ದಾಖಲೆ ಬರೆದರು.

### ಸೋಲಿನ ಕಹಿ, ಬ್ಯಾಟಿಂಗ್ ವೈಫಲ್ಯ

ಭಾರತ ತಂಡದ ನಿಜವಾದ ಸಾಮರ್ಥ್ಯ ಪರೀಕ್ಷೆ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ನಾಲ್ಕು ಪಂದ್ಯಗಳಲ್ಲಿ. ಸತತ 19 ಟೆಸ್ಟ್‌ಗಳಲ್ಲಿ ಸೋಲನ್ನೇ ಕಾಣದಿದ್ದ ತಂಡಕ್ಕೆ ಸ್ಟೀವನ್ ಸ್ಮಿತ್ ಬಳಗ ಪೆಟ್ಟು ಕೊಟ್ಟಿತು. ಫೆಬ್ರುವರಿ ತಿಂಗಳು ಪುಣೆಯಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಭಾರತ ತಂಡವು 333 ರನ್‌ಗಳಿಂದ ಸೋಲನುಭವಿಸಿತು. ಆಸ್ಟ್ರೇಲಿಯಾ ಸ್ಪಿನ್ನರ್ ಸ್ಟೀವ್ ಓಕೀಫ್ ಮತ್ತು ನೇಥನ್ ಲಾಯನ್ ಮುಂದೆ ಆಡಲು ಭಾರತ ತಂಡವು ಪರದಾಡಿತು.

ನಂತರ ಬೆಂಗಳೂರಿನಲ್ಲಿ ನಡೆದಿದ್ದ ಎರಡನೇ ಪಂದ್ಯದಲ್ಲಿ ಆತಿಥೇಯರು ಬಲವಾದ ತಿರುಗೇಟು ನೀಡಿದರು. ಸ್ಥಳೀಯ ಹೀರೊ ಕೆ.ಎಲ್. ರಾಹುಲ್ ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧಶತಕ ಗಳಿಸಿ ಪಂದ್ಯಶ್ರೇಷ್ಠ ಗೌರವ ಪಡೆದರು. ಇದರಿಂದಾಗಿ 1–1ರಿಂದ ಸಮಬಲವಾದ ಸರಣಿಯ ಉಳಿದ ಎರಡು ಪಂದ್ಯಗಳು ರೋಚಕತೆಯ ಕಣಜವಾದವು. ರಾಂಚಿಯಲ್ಲಿ ನಡೆದ ಮೂರನೇ ಟೆಸ್ಟ್‌ನಲ್ಲಿ ಪೂಜಾರ ದ್ವಿಶತಕ ರಂಗೇರಿತು. ಆದರೆ, ಆಸ್ಟ್ರೇಲಿಯಾದ ಬ್ಯಾಟ್ಸ್‌ಮನ್‌ಗಳ ದಿಟ್ಟ ಹೋರಾಟದಿಂದ ಪಂದ್ಯ ಡ್ರಾದಲ್ಲಿ ಮುಕ್ತಾಯವಾಗಿತ್ತು. ಆದರೆ ಹಿಮಾಲಯದ ತಪ್ಪಲಿನಲ್ಲಿರುವ ಧರ್ಮಶಾಲಾದಲ್ಲಿ ನಡೆದ ಕೊನೆಯ ಟೆಸ್ಟ್ ಪಂದ್ಯದಲ್ಲಿ ವಿರಾಟ್ ಅನುಪಸ್ಥಿತಿಯಲ್ಲಿ ಅಜಿಂಕ್ಯ ರಹಾನೆ ನಾಯಕತ್ವದ ಬಳಗವು ಅಧಿಕಾರಯುತ ಜಯ ದಾಖಲಿಸಿತು. ಅದರೊಂದಿಗೆ ಸರಣಿಯನ್ನು ತನ್ನ ಮುಡಿಗೇರಿಸಿಕೊಂಡಿತು. ಎರಡು ವರ್ಷಗಳ ನಂತರ 'ಬಾರ್ಡರ್–ಗಾವಸ್ಕರ್' ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಆದರೆ ಈ ಸರಣಿಯ ಮೊದಲ ಮೂರು ಪಂದ್ಯಗಳಲ್ಲಿಯೂ ವಿರಾಟ್ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಭುಜದ ಗಾಯದಿಂದಾಗಿ ಕೊನೆಯ ಪಂದ್ಯದಲ್ಲಿ ಆಡಲಿಲ್ಲ.

### ಆಲ್‌ರೌಂಡರ್‌ಗಳ ಸುಗ್ಗಿ ಕಾಲ

ಈ ಬಾರಿಯ ಟೆಸ್ಟ್ ಋತುವು ಆಲ್‌ರೌಂಡರ್‌ಗಳಿಗೆ ಸುಗ್ಗಿ ಕಾಲವಾಗಿತ್ತು. ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಜಯಂತ್ ಯಾದವ್ ಅವರು ಈ ಅವಧಿಯಲ್ಲಿ ಮಿಂಚಿದ ಪ್ರಮುಖರು. ಅದರಲ್ಲೂ ಅಶ್ವಿನ್ ಮತ್ತು ಜಡೇಜ ಐಸಿಸಿ ಬೌಲರ್ ಮತ್ತು ಆಲ್‌ರೌಂಡರ್‌ಗಳ ಪಟ್ಟಿಯ ಅಗ್ರಸ್ಥಾನದಲ್ಲಿ ತಮ್ಮನ್ನು ಗಟ್ಟಿಗೊಳಿಸಿಕೊಂಡಿದ್ದು ವಿಶೇಷ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅದ್ಭುತವಾದ ಆಟವಾಡಿದ ಇಬ್ಬರೂ ಭಾರತದ ಗೆಲುವಿಗೆ ಮಹತ್ವದ ಕಾಣಿಕೆ ನೀಡಿದರು. ಧರ್ಮಶಾಲಾ ಟೆಸ್ಟ್‌ನಲ್ಲಿ ಆಲ್‌ರೌಂಡ್ ಆಟವಾಡಿದ ಜಡೇಜ ಸರಣಿ ಶ್ರೇಷ್ಠ ಮತ್ತು ಪಂದ್ಯದ ಆಟಗಾರ ಗೌರವವನ್ನು ತಮ್ಮದಾಗಿಸಿಕೊಂಡರು.

ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಹರಿಯಾಣದ ಜಯಂತ್ ಯಾದವ್ ಎಂಟನೇ ಕ್ರಮಾಂಕದಲ್ಲಿಯೂ ಶತಕ ಗಳಿಸಿ ಭೇಷ್ ಎನಿಸಿಕೊಂಡರು.

ಅಲ್ಲದೇ ವೇಗದ ಬೌಲರ್‌ಗಳಾದ ಉಮೇಶ್ ಯಾದವ್, ಮೊಹಮ್ಮದ್ ಶಮಿ, ಭುವನೇಶ್ವರ್ ಕುಮಾರ್ ಮತ್ತು ಇಶಾಂತ್ ಶರ್ಮಾ ಸಿಕ್ಕ ಅವಕಾಶಗಳಲ್ಲಿ ತಮ್ಮ ಸಾಮರ್ಥ್ಯ ಮೆರೆದರು.

## ಸುದ್ದಿ ಮಾಡಿದ ಪಿಚ್‌ಗಳು

ಭಾರತದ ಪ್ರವಾಸಕ್ಕೆ ಬರುವ ಯಾವುದೇ ತಂಡಕ್ಕೂ ಇಲ್ಲಿಯ ಸ್ಪಿನ್ ಬೌಲರ್‌ಗಳು ಮತ್ತು ನಿಧಾನಗತಿಯ ಪಿಚ್‌ಗಳ ಭಯ ಕಾಡುವುದು ಸಹಜ. ಇಲ್ಲಿ ಟೆಸ್ಟ್ ಸರಣಿಗಳು ನಡೆದಾಗಲೆಲ್ಲ ಆಟಕ್ಕಿಂತ ಪಿಚ್‌ಗಳೇ ಹೆಚ್ಚು ಸುದ್ದಿಯಾಗುತ್ತವೆ. ಈ ಸಲ ಕಿವೀಸ್ ವಿರುದ್ಧದ ಸರಣಿಯಲ್ಲಿ ಕಾನ್ಪುರ ಮತ್ತು ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಪುಣೆಯ ಪಿಚ್‌ಗಳು ದೂಳೆಬ್ಬಿಸಿದವು.

ಅದರಲ್ಲೂ ಪುಣೆ ಪಿಚ್‌ನಲ್ಲಿ ಪಂದ್ಯವು ಮೂರೇ ದಿನಗಳಲ್ಲಿ ಮುಗಿದಿತ್ತು. ಮೊದಲ ದಿನದಿಂದಲೇ ಚೆಂಡು ನಿಧಾನಗತಿಯಲ್ಲಿ ಪುಟಿದು ತಿರುವು ಪಡೆದಿದ್ದು ಐಸಿಸಿ ರೆಫರಿ ಕೆಂಗಣ್ಣಿಗೆ ಕಾರಣವಾಗಿತ್ತು. ಇದರಿಂದ ಬಿಸಿಸಿಐ ಸಾಕಷ್ಟು ಟೀಕೆಗೆ ಗುರಿಯಾಗಬೇಕಾಯಿತು. ಮತ್ತೊಮ್ಮೆ ತಟಸ್ಥ ಪಿಚ್ ಕ್ಯೂರೇಟರ್ ನೇಮಕದ ಕೂಗು ಕೇಳಿಬಂದಿತ್ತು. ನಂತರ ಬೆಂಗಳೂರು ಪಿಚ್ ಬಗ್ಗೆಯೂ ಐಸಿಸಿ ರೆಫರಿ ಶೇ 100ರಷ್ಟು ಅಂಕ ಕೊಟ್ಟಿರಲಿಲ್ಲ.

ಈ ಋತುವಿನಲ್ಲಿ ಒಂದು ಗಮನಾರ್ಹ ಸಂಗತಿಯೆಂದರೆ ಇಲ್ಲಿ ನಡೆದ ಬಹುತೇಕ ಟೆಸ್ಟ್‌ಗಳಿಗೆ ಸಿದ್ಧಗೊಳಿಸಲಾಗಿದ್ದ ಪಿಚ್‌ಗಳು ವೇಗದ ಬೌಲರ್‌ಗಳಿಗೂ ಅನುಕೂಲಕರವಾಗಿದ್ದವು. ಜೂನ್‌ನಲ್ಲಿ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಸಿದ್ಧತೆಗಾಗಿ ಇಂತಹ ಪಿಚ್‌ಗಳಲ್ಲಿ ಆಡುವುದು ಭಾರತಕ್ಕೆ ಅಗತ್ಯವಾಗಿತ್ತು.

## ಕನ್ನಡಿಗರ ಮಿಂಚು

ರಾಹುಲ್ ದ್ರಾವಿಡ್ ಅವರ ನಂತರ ಭಾರತ ತಂಡಕ್ಕೆ ಕರ್ನಾಟಕವು ಗಟ್ಟಿ ಕೌಶಲ್ಯವಿರುವ ಇಬ್ಬರು ಬ್ಯಾಟ್ಸ್‌ಮನ್‌ಗಳನ್ನು ನೀಡಿದೆ. ಕೆ.ಎಲ್. ರಾಹುಲ್ ಮತ್ತು ಕರುಣ್ ನಾಯರ್ ಅವರು ಈ ಋತುವಿನಲ್ಲಿ ತಮ್ಮ ತೋಳ್ಬಲ ಮೆರೆದರು. ರಾಹುಲ್ ಕಿವೀಸ್ ಎದುರಿನ ಸರಣಿಯ ಎರಡು ಪಂದ್ಯ ಮತ್ತು ಇಂಗ್ಲೆಂಡ್ ಎದುರಿನ ಒಂದು ಪಂದ್ಯದಲ್ಲಿ ಆಡಿರಲಿಲ್ಲ. ಗಾಯದ ಸಮಸ್ಯೆಯಿಂದ ವಿಶ್ರಾಂತಿ ಪಡೆದಿದ್ದರು. ಆದರೆ, ಚೆನ್ನೈನಲ್ಲಿ ಇಂಗ್ಲೆಂಡ್ ಎದುರಿನ ಪಂದ್ಯದಲ್ಲಿ ರಾಹುಲ್ ಕೇವಲ ಒಂದು ರನ್‌ನಿಂದ ದ್ವಿಶತಕ ವಂಚಿತರಾದರು. ಅವರೊಂದಿಗೆ ಉತ್ತಮ ಜೊತೆಯಾಟವಾಡಿದ್ದ ಕರುಣ್ ನಾಯರ್ ತ್ರಿಶತಕ ಬಾರಿಸಿ ದಾಖಲೆ ನಿರ್ಮಿಸಿದರು. ವೀರೇಂದ್ರ ಸೆಹ್ವಾಗ್ ನಂತರ ಈ ಸಾಧನೆ ಮಾಡಿದ ಎರಡನೇ ಭಾರತೀಯ ಆಟಗಾರನಾದರು. ಆದರೆ ಆಸ್ಟ್ರೇಲಿಯಾ ಎದುರು ಕರುಣ್ ವಿಫಲರಾದರು. ರಾಹುಲ್ ಮಾತ್ರ ಆರು ಅರ್ಧಶತಕಗಳನ್ನು ದಾಖಲಿಸಿ ಮಿಂಚಿದರು.

ಸ್ಪಿನ್ ಬೌಲಿಂಗ್ ದಂತಕಥೆ ಅನಿಲ್ ಕುಂಬ್ಳೆ ಅವರು ತಂಡದ ಕೋಚ್ ಆದ ನಂತರ ಭಾರತದಲ್ಲಿ ನಡೆದಿದ್ದ ಸರಣಿಗಳು ಇವು. ತಂಡದ ಈ ಅಮೋಘ ಸಾಧನೆಯ ಶ್ರೇಯದಲ್ಲಿ ಅವರದ್ದೂ ಮಹತ್ವದ ಪಾತ್ರವಿದೆ.